ಒದಗಿಸಿಲ್ಲ ಪ್ರಾವಿಜನ್ ಮಾಡಿಕೊಂಡಿಲ್ಲ ಅದಕ್ಕೆ ಏನು ಮಾಡುತ್ತೀರಿ ಎಂದು ವಿವರಣೆ ನೀಡಬೇಕೆಂದು ಕೇಳುತ್ತಾ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

4 ವರದಿಯನ್ನೊಪ್ಪಿಸುವುದು

ವಿಷಯ ಅಧೀನ ಶಾಸನಾ ರಚನಾ ಸಮಿತಿಯ 2006–2007ನೇ ಸಾಲಿನ 33ನೇ ವಿಶೇಷ ವರದಿ

ಶ್ರೀ ಎನ್ ಯೋಗೀಶ್ ಭಟ್ (ಮಂಗಳೂರು) – ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮತಿಯ ಅಧ್ಯಕ್ಷನಾದ ನಾನು 2006–2007ನೇ ಸಾಲಿಗೆ ಆರ್ಥಿಕ ಇಲಾಖೆಯಡಿಯಲ್ಲಿ ಬರುವ ವಾಣಿಜ್ಯ ತೆರಿಗೆ ಇಲಾಖೆಗೆ ಸಂಬಂಧಿಸಿದಂತೆ ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರದ ಓಎಫ್‌ಸಿ ಮೂಲಕ ಬ್ರಾಡ್ ಬ್ಯಾಂಡ್ ಸೇವೆ ನೀಡುವ ದೂರಸಂಪರ್ಕ ಸಂಸ್ಥೆಗಳು ಸರ್ಕಾರಕ್ಕೆ ತೆರಿಗೆ ವಂಚನೆ ಮಾಡುತ್ತಿರುವ ಬಗೆಗಿನ ವಿಶೇಷ ವರದಿ, ಮೂವತ್ಮೂರನೇ ವರದಿಯನ್ನು ಸಮಿತಿಯ ಪರವಾಗಿ ಮಂಡಿಸುತ್ತಿದ್ದೇನೆ

ಉಪಾಧ್ಯಕ್ಷರು – ವರದಿಯನ್ನೊಪ್ಪಿಸಲಾಯಿತು

(5) ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ದೇವದಾಸಿಯರ ಅಭಿವೃದ್ಧಿಗಾಗಿ ಮನೆ ನಿರ್ಮಾಣ ಮತ್ತು ವಿಧವಾ ವೇತನ

286 (1929) ಶ್ರೀ ರೋಷನ್ ಬೇಗ್ ಆರ್ (ಜಯಮಹಲ್) – ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ, ಬಿಜಾಪುರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿನ ದೇವದಾಸಿಯರ ಅಭಿವೃದ್ಧಿಗಾಗಿ 15000 ಮನೆಗಳನ್ನು ನಿರ್ಮಿಸಿ ಅವರಿಗೆ ಒದಗಿಸಲಾಗುವುದೆಂದು ಮಾನ್ಯ ಮುಖ್ಯ ಮಂತ್ರಿಯವರು ಘೋಷಿಸಿರುವುದು ನಿಜವೇ,